# 10ನೇ ಆರ್‌ಎಕ್ಸ್‌ಲೈಫ್ ಹರ್‌ಕ್ಯುಲಸ್
# ಸೈಕಲ್ ರ್‍ಯಾಲಿ-ಡಿಸೆಂಬರ್ 11ಕ್ಕೆ

ಸ್ವಸ್ತಿ ಆರ್‌ಎಕ್ಸ್‌ಲೈಫ್ ಟ್ರಸ್ಟ್ ನಿಯೋಜಿತ 10ನೇ ವರ್ಷದ ಆರ್‌ಎಕ್ಸ್‌ಲೈಫ್ ಹರ್‌ಕ್ಯುಲಸ್ ಸೈಕಲ್ ರ್‍ಯಾಲಿಯು ಡಿಸೆಂಬರ್ 11ರ ಆದಿತ್ಯವಾರ ಮಂಗಳೂರಿನಲ್ಲಿ ನಡೆಯಲಿದೆ.

ಅಂದು ಬೆಳಿಗ್ಗೆ 6.30 ಗಂಟೆಗೆ ಲೇಡಿಹಿಲ್ ವೃತ್ತದಿಂದ ಹೊರಡುವ 22 ಕಿ.ಮೀ ದೂರದ ಈ ಸೈಕಲ್ ರ್‍ಯಾಲಿಯು ಲೇಡಿಹಿಲ್–ಕೊಟ್ಟಾರ–ಕೂಳೂರು–ಪೇಜಾವರ–ಕೂಳೂರು–ಉರ್ವಸ್ಟೋರ್–ಅಶೋಕನಗರ–ಹ್ಯೊಗೆಬೈಲ್–ಬತ್ತೇರಿ ಮಾರ್ಗವಾಗಿ ಸಾಧಾರಣ 9.00ರಿಂದ 9.30 ಗಂಟೆ (ಬೆಳಿಗ್ಗೆ) ಸಮಯಕ್ಕೆ ಅಮೃತ ವಿದ್ಯಾಲಯಂ ಮೈದಾನದಲ್ಲಿ ಸಮಾರೋಪಗೊಳ್ಳಲಿದೆ.

ವರ್ಷ 2007ರಲ್ಲಿ 240 ಸವಾರರಿದ್ದ ಈ ರ್‍ಯಾಲಿಯು ಸಾರ್ವಜನಿಕರ ಸತತ ಪ್ರೋತ್ಸಾಹದಿಂದ ಕಳೆದ ಬಾರಿ 2500 ಸಂಖ್ಯೆ ದಾಟಿದ್ದು, ಈ ಬಾರಿ 3000 ಸವಾರರು ಭಾಗವಹಿಸುವ ನಿರೀಕ್ಷೆ ಇದೆ.

ತಮ್ಮ ಮನೆಯಂಗಳ, ಫ್ಲ್ಯಾಟಿನ ಆವರಣದಿಂದ ಹೊರಗೆ ಸೈಕಲ್ ತುಳಿಯಲು ದಟ್ಟ ವಾಹನ ಸಾರಿಗೆಯಿಂದಾಗಿ ಅಂಜುತ್ತಿರುವ ಹಲವರಿಗೆ ಈ ರ್‍ಯಾಲಿಯು 22 ಕಿ.ಮೀ ಸೈಕ್ಲಿಂಗ್ ಸವಾರಿಯ ಅನುಭವ, ಹಲವು ಸವಾರರ ಜೊತೆ ತಮ್ಮ ನಗರದ ಸುತ್ತಲಿನ ಸೌಂದರ್ಯವನ್ನು ಸವಿಯುವ ಅವಕಾಶ ಹಾಗೂ ಎಂದೂ ಸಾಗದ ಹೊರರಸ್ತೆಗಳ ಪರಿಚಯವನ್ನು ನೀಡುತ್ತಾ ಬಂದಿದೆ. ಈ ರ್‍ಯಾಲಿಯು ಯಾವುದೇ ಸ್ಪರ್ಧೆ ಯಾ ರೇಸ್ ಅಲ್ಲ.

**ಉದ್ದೇಶ :**

ರಸ್ತೆ ಸುರಕ್ಷತೆ ಈ ಸಲದ ರ್‍ಯಾಲಿಯ ಉದ್ದೇಶವಾಗಿದ್ದು "ಸುರಕ್ಷಿತ ರಸ್ತೆ–ಸುರಕ್ಷಿತ ಸವಾರಿ" ಧ್ಯೇಯವಾಕ್ಯ. (Safe Roads - Save Lives). ನಗರದ ರಸ್ತೆಗಳು ದ್ವಿಚಕ್ರ ವಾಹನ ಸವಾರರಿಗೆ ಸುರಕ್ಷಿತವಾಗಿರುವಂತೆ ಸಂಬಂಧ ಪಟ್ಟವರಲ್ಲಿ ಆಗ್ರಹಿಸಲು ಹಾಗೂ ಚತುಷ್ಚಕ್ರ ವಾಹನ ಚಾಲಕರು ಸೈಕಲ್ ಸವಾರರ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವಂತೆ ಪ್ರೇರೇಪಿಸಲು ಈ ರ್‍ಯಾಲಿಯು ಸಹಾಯಕಾರಿಯಾಗಲಿದೆ.

ಇದರ ಜೊತೆಗೆ ರಸ್ತೆ ನಿಯಮ ಪಾಲನೆ, ಹೊರಾಂಗಣ ಕ್ರೀಡೆಯತ್ತ ಒಲವು ಹಾಗೂ ಪರಿಸರ ಕಾಳಜಿ (ಪಶ್ಚಿಮ ಘಟ್ಟ ಉಳಿಸಿ) ಇವನ್ನು ಬೆಳೆಸಲೂ ಸೈಕಲ್ ರ್‍ಯಾಲಿಯು ಸ್ಪಂದಿಸಿದೆ. ಮುಖ್ಯವಾಗಿ ಸಣ್ಣ ಸಂಸಾರದ ಏಕಾಂಗಿತನವನ್ನು ತೊರೆದು ಸಾವಿರಾರು ಸವಾರರೊಂದಿಗೆ 22 ಕಿ.ಮೀ ದೂರವನ್ನು ಕ್ರಮಿಸುವುದೇ ಒಂದು ಅನುಭವ. ಇದನ್ನು ಇಷ್ಟಪಡುವ ಹಲವರು ಕುಟುಂಬ ಸಮೇತರಾಗಿ ಈ ರ್‍ಯಾಲಿಯಲ್ಲಿ ಭಾಗವಹಿಸುವುದು ಒಂದು ವಿಶೇಷ.

**ನಿಯಮ :**

ರ್‍ಯಾಲಿಯು ಸಾಂಗವಾಗಿ ನಡೆಯುವ ಸಲುವಾಗಿ ಮಾಡಬೇಕಾದ ಹಲವು ವ್ಯವಸ್ಥೆಗಾಗಿ, ಭಾಗವಹಿಸುವ ಸವಾರರು ಮುಂಚಿತವಾಗಿ ನೋಂದಣಿಯನ್ನು ಮಾಡಬೇಕಾಗಿದ್ದು, ಮಣ್ಣಗುಡ್ಡ 'ಗುರ್ಜಿ ಸೆಂಟರ್'ನಲ್ಲಿ ಹಾಗೂ ಪಾಂಡೇಶ್ವರದಲ್ಲಿರುವ ಆರ್‌ಎಕ್ಸ್‌ಲೈಫ್‌ನಲ್ಲಿ ಡಿಸೆಂಬರ್ 9ರ ಮೊದಲು ನೋಂದಾಯಿಸಬೇಕಾಗಿದೆ. (ಫೋನ್ : 2443192, 9986754875, ವೆಬ್‌ಸೈಟ್ : www.rxlife.in). ಪ್ರತಿ ಸವಾರರಿಗೆ ಹಾಗೂ ಪ್ರತಿ ಸೈಕಲ್‌ಗೆ ಗುರುತು ಸಂಖ್ಯೆಯನ್ನು ನೀಡಲಾಗುವುದು. ಹತ್ತು ವರ್ಷ ಮೇಲ್ಪಟ್ಟ ಸೈಕಲ್ ಸವಾರಿ ಬಲ್ಲ ಯಾರೂ ಕೂಡ ಭಾಗವಹಿಸಬಹುದಾಗಿದೆ. ಕಳೆದ ಬಾರಿ 83 ವರ್ಷದ

P.T.O

ಹಿರಿಯರು ಭಾಗವಹಿಸಿದ್ದರು.

ಈ ರ್‍ಯಾಲಿಯು ಯಾವುದೇ ಸ್ಪರ್ಧೆ ಯಾ ರೇಸ್ ಅಲ್ಲ. ಭಾಗವಹಿಸಲು ಪ್ರೋತ್ಸಾಹಕವಾಗಿ 5 ಸೈಕಲ್‌ಗಳನ್ನು ವಿವಿಧ ವಿಭಾಗಗಳಲ್ಲಿ ಅದೃಷ್ಟ ಚೀಟಿ ಎತ್ತಿ ವಿತರಿಸಲಾಗುವುದು. ಈ ಸೈಕಲ್‌ಗಳನ್ನು ಹರ್‌ಕ್ಯುಲಸ್ ಸೈಕಲ್ ಅವರು ಪ್ರಾಯೋಜಿಸಿದ್ದಾರೆ.

**ವ್ಯವಸ್ಥೆ :**
ಪೈಲಟ್ ಜೀಪ್, ಅಂಬುಲೆನ್ಸ್, ಹಾಳಾದ ಸೈಕಲ್ ಹಾಗೂ ಸುಸ್ತಾದ ಸವಾರರನ್ನು ಹಿಂತರಲು ವಾಹನ, ನೀರು, ಕಿತ್ತಳೆ, ಖರ್ಜೂರ, ಪಾನೀಯ ಹಾಗೂ ಬೆಳಗ್ಗಿನ ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿದೆ. KSHEMA ಸಂಸ್ಥೆಯು ತುರ್ತು ವೈದ್ಯಕೀಯ ಸಹಾಯವನ್ನು ಆಯೋಜಿಸಿದೆ. ಇದೊಂದು ಪರಿಸರ ಸ್ನೇಹಿ ರ್‍ಯಾಲಿಯಾಗಿದ್ದು ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ.

**ಸ್ವಯಂ ಸೇವಕರು :**
ಸುಮಾರು 200 ಸ್ವಯಂ ಸೇವಕರು ಈ ರ್‍ಯಾಲಿಯ ವ್ಯವಸ್ಥೆಯಲ್ಲಿ ಶ್ರಮಿಸಲಿದ್ದಾರೆ. YHAI, ಟೀಂ ಮಂಗಳೂರು, ಸಿ. ಎ. ಸ್ಟೂಡೆಂಟ್ಸ್ ಅಸೋಸಿಯೇಶನ್, ಆರ್‌ಎಕ್ಸ್‌ಲೈಫ್ ಫ್ಯಾಮಿಲಿ ಹಾಗೂ ಪ್ರಮುಖವಾಗಿ ಮಂಗಳೂರು ಹಾಗೂ ಸುರತ್ಕಲ್ ವಿಭಾಗದ ಪೋಲೀಸರ ಸಹಕಾರದಿಂದ ಈ ರ್‍ಯಾಲಿಯನ್ನು ಆಯೋಜಿಸಲಾಗುತ್ತಿದೆ.

**ಪ್ರಾಯೋಜಕರು :**
ಹರ್‌ಕ್ಯುಲಸ್, ಐಡಿಯಲ್ ಐಸ್‌ಕ್ರೀಂ, ಕೆ. ಉಲ್ಲಾಸ್ ಕಾಮತ್, ಜ್ಯೋತಿ ಸೈಕಲ್ ಕಂ, ಎಂಆರ್‌ಪಿಎಲ್, ನಿಟ್ಟೆ ಗ್ರೂಪ್, ಕರ್ನಾಟಕ ಬ್ಯಾಂಕ್ ಈ ರ್‍ಯಾಲಿಯ ಪ್ರಾಯೋಜಕತ್ವಕ್ಕಾಗಿ ಮುಂದೆ ಬಂದಿದ್ದಾರೆ.

**ಕನ್ನಡಿಗ ವರ್ಲ್ಡ್ ಛಾಯಾಚಿತ್ರ ಸ್ಪರ್ಧೆ :** ರ್‍ಯಾಲಿಯ ಫೋಟೋ ಸ್ಪರ್ಧೆಯನ್ನು ಆಯೋಜಿಸಲಾಗಿದೆ.
ವಿಷಯ : 'ಸಮೂಹ ಸವಾರಿ (ರೈಡಿಂಗ್ ಟುಗೆದರ್)'. ಇದರಲ್ಲಿ ಎಲ್ಲರೂ ಭಾಗವಹಿಸಬಹುದು. ಚಿತ್ರವನ್ನು ರ್‍ಯಾಲಿಯ ಸಮಯದಲ್ಲಿ ಸೆರೆಹಿಡಿಯಬೇಕು. ಒಬ್ಬರು 3 ಫೋಟೊವನ್ನು ಕಳಿಸಬಹುದು.

ಕಳಿಸಬೇಕಾದ ವಿಳಾಸ : svastirxlife@gmail.com, ಡಿಸೆಂಬರ್ 20ರ ಒಳಗೆ ಕಳುಹಿಸಬೇಕು. ಇದಕ್ಕೆ ಯಾವುದೇ ಪ್ರವೇಶ ಶುಲ್ಕವಿಲ್ಲ. ಆಯ್ದ ಫೊಟೊಗಳಿಗೆ 3 ಬಹುಮಾನಗಳನ್ನು (ರೂ. 3000, 2000, 1000) ನೀಡಲಾಗುವುದು.

ದಿನಾಂಕ : 06.12.2016

**ಡಾ. ಗಾಯತ್ರಿ ಭಟ್**
9448467181

**ವಂದನಾ ನಾಯಕ್**
9986754875

ಟ್ರಸ್ಟಿಗಳು
**ಸ್ವಸ್ತಿ ಆರ್ ಎಕ್ಸ್ ಲೈಫ್ ಟ್ರಸ್ಟ್**